## ಬ್ಯೂಟಿಪಾರ್ಲರ್ ಮಹಿಮೆ

ನಂಜ ಮದುವೆ ಆಗಿ ಹದಿನೈದು ದಿನಗಳಾಗಿತ್ತು. ಹೆಂಡತಿ ಜತೆ ಬ್ಯೂಟಿಪಾರ್ಲರ್‌ಗೆ ಬಂದಿದ್ದ. ಹೆಂಡತಿ ಪಾರ್ಲರ್ ಒಳಗೆ ಹೋಗಿದ್ದರೆ, ಈತ ವೇಟಿಂಗ್ ರೂಂನಲ್ಲಿ ಕುಳಿತು ಮೊಬೈಲ್ ನೋಡುತ್ತಾ ಕುಳಿತಿದ್ದ. ಒಂದು ಗಂಟೆ ಆದಮೇಲೆ ಮಹಿಳೆಯೊಬ್ಬರು ನಂಜನ ಬಳಿಗೆ ಬಂದು 'ಬರ್ತೀರಾ' ಎಂದು ಕೇಳಿದಳು.

ತಕ್ಷಣವೇ ನಂಜ ಆ ಮಹಿಳೆಯನ್ನು ನೋಡಿ ಗಾಬರಿಯಿಂದ 'ಅಯ್ಯೋ ನಾನು ಅಂಥವನಲ್ಲ. ನನಗೆ ಮದುವೆ ಆಗಿದೆ. ನನ್ನ ಹೆಂಡತಿ ಪಾರ್ಲರ್ ಒಳಗೆ ಇದ್ದಾಳೆ' ಎಂದ.

ಆಗ ಆ ಮಹಿಳೆ ನಗುತ್ತಾ 'ಸುಮ್ನೆ ಬನ್ರೀ. ನಾನೇ ನಿಮ್ಮ ಹೆಂಡತಿ' ಅಂದಳು!

**ವಿ. ಹೇಮಂತ ಕುಮಾರ್**



---

## ಇದೇನು ಮಹಾತಪ್ಪು?

'ನೋಡಪ್ಪಾ, ಅಮ್ಮ ಸುಮ್‌ಸುಮ್ಮನೆ ಬೈತಿದಾಳೆ' ಅಂದ ಗುಂಡ.

'ಯಾಕಪ್ಪಾ ಏನಾಯ್ತು?' ಅಂದ ಅಪ್ಪ. ಆಗ ಗುಂಡ 'ಇವತ್ತು ರಿಪೋರ್ಟ್ ಕಾರ್ಡ್ ಕೊಟ್ರಪ್ಪಾ, ಏನೋ ಒಂದು 'ಸಣ್ಣ ತಪ್ಪು' ಮಾಡಿದ್ದೆ. ಅದನ್ನು ನೋಡಿ ಕೋಪ ಮಾಡ್ಕೊಂಡಿದಾಳೆ ಅಮ್ಮ ಎಂದ.

ಮಗನ ಮಾತು ಕೇಳಿ ಅಪ್ಪ 'ಹೌದಾ ಎಲ್ಲಿ ರಿಪೋರ್ಟ್ ಕಾರ್ಡ್ ಕೊಡು ನೋಡೋಣ' ಎಂದ. ಗುಂಡ ಕೊಟ್ಟ ರಿಪೋರ್ಟ್ ಕಾರ್ಡ್ ನೋಡಿದ ಅಪ್ಪ 'ಏನೋ ಇದು. ಇದು ಸಣ್ಣ ತಪ್ಪಾ? ಎಲ್ಲ ವಿಷಯಗಳಲ್ಲೂ ಸೊನ್ನೆ ತಗೊಂಡಿದ್ದೀಯಲ್ಲೋ' ಅಂತ ಕೆಂಡಾಮಂಡಲವಾದ.

'ಅಯ್ಯೋ ನೀವೂ ತಪ್ಪು ತಿಳಿದ್ರಿ ನೋಡಿ. ಸೊನ್ನೆ ತೊಗೊಳೋದು ಹೆಮ್ಮೆಯ ವಿಷಯ. ಸೊನ್ನೆ ಎನ್ನೋದು ನಮ್ಮ ಹೆಮ್ಮೆಯ ಆರ್ಯಭಟನ ಆವಿಷ್ಕಾರ. ಅಲ್ವೇ ದೊಡ್ಡಪ್ಪ' ಎಂದ ಗುಂಡ. ಅದನ್ನು ಕೇಳಿದ ದೊಡ್ಡಪ್ಪ, ಅಪ್ಪ, ಅಮ್ಮ ಎಲ್ಲರೂ ನಗುವಿನಲ್ಲಿ ಮುಳುಗಿದರು.



ಕಲೆ: ಗಣೇಶ ಆಚಾರ್ಯ

**ಸುಮನಾ**